ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, 1st March 1973/Phalguna 10, 1894 S. E.

The House met in the Assembly Chamber, Vidhana Soudha, at One o the Clock.

MADAM SPEAKER (SMT. K. S NAGARATHNAMMA) in the Chair.

STARRED QUESTIONS
(To which oral answers were given)

MINERAL ORES AVAILABLE IN HASSAN DISTRICT

15. SRI K. H. HANUME GOWDA (Hassan).—

Will the Minister for Industries be pleased to state :—

(*a*) the mineral ores that are available in the areas of Hassan district according to recent surver report ;

(*b*) the factories that the Government inted to set up by utilising the said mineral ores ?

SRI S. M. KRISHNA.—(Minister for Industries)

(*a*) the following minerals are available in Hassan district.

Gold	...	Kempinakote
Copper	...	Kalyadi
Iron ore	...	Doddagudda
Chromite	...	Byrapura, Jamburi Chokkonahalli.
Asbestos	...	Holenarasipur, Idagondanahalli.
Corrundum	...	Mavinakere.
Garnet	...	Mavinakere.
Suddemannu	...	Bageshpur.

(*b*) A factory to purify 'Suddemannu' has been established, in Bageshapur. The chromite ore at Byrapur is taken out and sold. A copper mine has been established near Kalyadi.

ಶ್ರೀ ಕೆ. ಎಚ್. ಹನುಮೇಗೌಡ.—ಚಿನ್ನದ ಅದಿರು ಕೆಂಪನಕೋಟೆ ಹತ್ತಿರ ಸಿಕ್ಕುತ್ತದೆ ಎಂದು ಹೇಳಿದ್ದೀರಿ. ಅದು ಯಾವ ತಾಲ್ಲೂಕು ಮತ್ತು ಯಾವ ವಿರಿಯಾ ತಿಳಿಸುತ್ತೀರಾ ? ಐರನ್ ಓರ್ ದೊಡ್ಡಗುಡ್ಡ ಹತ್ತಿರ ಸಿಕ್ಕುತ್ತದೆ ಎಂದು ಹೇಳಿದ್ದೀರಿ ಅದು ಯಾವ ಪ್ರದೇಶ ? ಹಾಸನ ಜಿಲ್ಲೆಯಲ್ಲಿ ಸಿಕ್ಕ ತಕ್ಕ ಎಲ್ಲಾ ಅದಿರು ಯಾವ ದರ್ಜೆಯದು ಮತ್ತು ಎಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆ ಎಂದು ಅಂದಾಜು ಇದೆಯೇ ?

† ಶ್ರೀ ಎಸ್. ಎಂ. ಕೃಷ್ಣ.—ಚಿನ್ನದ ಬಗ್ಗೆ ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾದವರು ಇನ್ನೂ ಸರ್ವೆ ಮಾಡ್ತಾ ಇದ್ದಾರೆ. ತಾಲ್ಲೂಕು ಯಾವುದು ಗೊತ್ತಿಲ್ಲ I do not have that information. I can supply the information to the hon. member after ascertaining where exactly it is located. We are anxiously awaiting the report from the Geological Survey of India about the extent of concentration of gold here.

ಶ್ರೀ ಕೆ. ಎಚ್. ಹನುಮೇಗೌಡ —ಭಾಗೇಶ್ವರದಲ್ಲಿ ಜೇಡಿ ಮಣ್ಣು ಸಿಕ್ಕುತ್ತದೆ ಎಂದು ಹೇಳಿದ್ದೀರಿ ಅದನ್ನು ಪರಿಷ್ಕರಿಸಿ ಹೊರಕ್ಕೆ ಕಳುಹಿಸುತ್ತೀರಾ ? ಕಲ್ಯಾಡಿ ಹತ್ತಿರ ಕಾಪರ್ ಸಿಕ್ಕುತ್ತದೆ. ಹಿಂಗೆ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾಗಿರುವ ವೆಟರಿಯಲ್ಸ್ ಹಾಸನ ಜಿಲ್ಲೆಯಲ್ಲಿ ದೊರೆಕುತ್ತದೆ. ಕೈಗಾರಿಕಾ ದೃಷ್ಟಿಯಿಂದ ಅದು ಹಿಂದುಳಿದ ಜಿಲ್ಲೆ ಆಗಿರುವ ಕಾರಣ ಅಲ್ಲಿ ಫಿನಿಸ್ಡ್ ಕಾಪರ್ ಮತ್ತು ಜೇಡಿ ಮಣ್ಣಿನ ಉಪಕರಣಗಳನ್ನು ಮಾಡುವುದಕ್ಕೆ ಸರಕಾರವೇ ನಡೆಸತಕ್ಕಂಥ ಒಂದು ಕಾರ್ಖಾನೆಯನ್ನು ತೆಗೆಯುವ ಆಲೋಚನೆ ಸರಕಾರಕ್ಕೆ ಇದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಕಲ್ಯಾಡಿಯಲ್ಲಿ ತಾಮ್ರದ ನಿಕ್ಷೇಪ ಸಿಕ್ಕಿರತಕ್ಕಂಥದ್ದು ಖಾತರಿ ಆಗಿದೆ. ಚಿತ್ರದುರ್ಗ ಕಾಪರ್ ಕಂಪನಿ ಸ್ಟೇಟ್ ಗವರ್ನಮೆಂಟ್ ಅಂಡರ್‌ಟೇಕಿಂಗ್. ಅವರು ಕಲ್ಯಾಡಿಯಲ್ಲಿಯೂ ಕೂಡ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಬೇಕು ಎಂದು ತೀರ್ಮಾನಕ್ಕೆ ಬಂದಿದ್ದಾರೆ. ಹಿಂದೂಸ್ತಾನ್ ಕಾಪರ್ ಕಾರ್ಪೊರೇಷನ್ ಕೇಂದ್ರ ಸರಕಾರದ ಒಂದು ಭಾಗ ಇದೆ. ಆದರ ಜೊತೆಯಲ್ಲಿ ರಾಜ್ಯ ಸರಕಾರದವರು ನೆಗೋಸಿಯೇಷನ್ ಪ್ರಾರಂಭ ಮಾಡಿದ್ದಾರೆ. ಮೈನ್ಸ್ ದೊಡ್ಡದು ಮಾಡಬೇಕಾದರೆ ಚಿತ್ರದುರ್ಗ ಕಾಪರ್ ಕಂಪನಿ ಒಂದರಿಂದಲೇ ಸಾಧ್ಯವಾಗುವುದಿಲ್ಲ. ಕೋಟ್ಯಾಂತರ ರೂಪಾಯಿ ಹಣ ಬೇಕಾಗುತ್ತದೆ. ಆದುದರಿಂದ ಗುಲ್ಬರ್ಗ ಜಂಟಿಣಿ ಭಾಗದಲ್ಲಿರುವ ತಾಮ್ರದ ನಿಕ್ಷೇಪಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸರಕಾರದವತು ಕೇಂದ್ರಸರಕಾರದ ಹಿಂದೂಸ್ತಾನ್ ಕಾಪರ್ ಕಾರ್ಪೊರೇಷನ್ ಜೊತೆಯಲ್ಲಿ ನೆಗೋಸಿಯೇಷನ್ ಪ್ರಾರಂಭ ಮಾಡಿದ್ದಾರೆ.

ಶ್ರೀ ಎಸ್. ಹೆಚ್, ಪುಟ್ಟರಂಗನಾಥ್ —ಸ್ವಾಮಿ ಚಿನ್ನ ಕೆಂಪನಕೋಟೆ ಹತ್ತಿರ ಸಿಕ್ಕುತ್ತದೆ ಎಂದು ಹೇಳಿದ್ದೀರ. ಕೆಂಪನಕೋಟೆ ಎಂಬ ಪ್ರದೇಶ ನಮ್ಮಲ್ಲಿ ಎಲ್ಲೂ ಇಲ್ಲ ಎನ್ನತಕ್ಕದ್ದು ನನ್ನ ಭಾವನೆ. ಬೆಳ್ಳೂರು ತಾಲ್ಲೂಕಿನಲ್ಲಿ ಸೀಗದಗುಡ್ಡ ಪ್ರದೇಶದಲ್ಲಿ ಹಳೇಬೀಡು ಸುತ್ತಮುತ್ತ ಪ್ರದೇಶದಲ್ಲಿ ಸಿಕ್ಕುತ್ತದೆ ಎಂಬ ವರದಿ ಇದೆ. ಮಾಹಿತಿ ತರಿಸಿಕೊಂಡು ಜಿಯಲಾಜಿಕಲ್ ಇಲಾಖೆ ಮುಂಖಾಂತರ ಸರ್ವೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಕೆಂಪನಕೋಟೆಯಲ್ಲಿ ಚಿನ್ನ ಸಿಕ್ಕುತ್ತದೆ ಎನ್ನತಕ್ಕ ಮಾತು ನಂಬಲಿಕ್ಕೆ ತಯಾರು ಇಲ್ಲ ಎಂದು ಹೇಳುತ್ತೀರಿ, ಹೊಸ ಸ್ಥಳದಲ್ಲಿ ಚಿನ್ನ ಸಿಕ್ಕುತ್ತದೆ ಎಂದು ವರದಿಯಾಗಿದೆ ಅದನ್ನು ನೋಡಿಸುತ್ತೀರಾ ಎಂದು ಕೇಳುತ್ತೀರಿ ನೋಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಕ್ರೋಮೈಟ್ ಅದಿರನ್ನು ಯಾರಿಗೆ ಮಾರಾಟ ಮಾಡುತ್ತೀರಾ ? ಪ್ರೈವೇಟ್ ಸೆಕ್ಟಾರಿಗಾ ಅಥವಾ ಪಬ್ಲಿಕ್ ಸೆಕ್ಟಾರಿಗ ?

SRI S. M. KRISHNA.—I want notice, Sir.

ಶ್ರೀ ಕೆ. ಹೆಚ್. ಹನುಮೇಗೌಡ.—ಹಾಸನ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವಾಗಿರುವುದರಿಂದ ಭಾಗೇಶ್ವರದ ಜೇಡಿ ಮಣ್ಣು, ಕಲ್ಯಾಡಿಯ ತಾಮ್ರದ ಅದಿರು ಮತ್ತು ಕ್ರೋಮೈಟ್ ಅದಿರುಗಳಿಗೆ ಸಂಬಂಧಪಟ್ಟ ಉಪ ಕೈಗಾರಿಕೆಗಳನ್ನು ಈ ಹಾಸನ ಪಟ್ಟಣದಲ್ಲಿ ಸ್ಥಾಪಿಸುವ ಆಲೋಚನೆ ಸರಕಾರಕ್ಕೆ ಇದೆಯೇ ? ತಮಗೆ ತಿಳಿದಿರುವ ಹಾಗೆ ಉಪ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಸಾಧುವಾಗಿದೆ. ತಾಮ್ರದ ಅದಿರನ್ನು ಹೊರಕ್ಕೆ ತೆಗೆಯತಕ್ಕಂಥದು ಒಂದು ದೊಡ್ಡ ಕೈಗಾರಿಕೆ. ಹಾಸನ ಜಿಲ್ಲೆಯಲ್ಲಿ ತಾಮ್ರವನ್ನು ಹೊರ ತೆಗೆಯುವುದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ತಾಮ್ರದ ಗಣಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀವೆ. ತಾಮ್ರದ ಅದಿರನ ಉಪ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಆಲ್ಲಿನ ಜನಗಳು ಮುಂದೆ ಬಂದರೆ ಅಭಿವೃದ್ಧಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರಕಾರದ ಜವಾಬ್ದಾರಿ. ಹಾಸನ ಹಿಂದುಳಿದ ಜಿಲ್ಲೆ, ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿದೆ ಎಂದು ಸರಕಾರ ಮನಗಂಡಿದೆ. ಅಲ್ಲಿ ಖಿಡಸಾರಿ ಷುಗರ್ ಫ್ಯಾಕ್ಟರಿ ಮಾಡುವುದಕ್ಕೂ ಕೂಡ ಸರಕಾರ ತೀವ್ರ ಆಲೋಚನೆ ಮಾಡುತ್ತಿದೆ.

† Asterisks indicate that remarks or speeches have not been revised by the member concerned.